# ಗೋಪಗೋಪನೆಂಬೊ ಕೋಕಿಲ

1. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 63.
2. **Note:** This song is not available in other standard books that I referred.
3. **Note:** Singer has followed these lyrics.

ರಾಗ: ಧನಾಸರಿ ತಾಳ: ಆದಿ

ಗೋಪಗೋಪನೆಂಬೊ ಕೋಕಿಲ ನಮ್ಮ
ಶ್ರೀಪತಿಯ ಕಂಡರೆ ಬರಹೇಳು ಕೋಕಿಲ ‖ ಪ ‖

ಮಧುಮಾಸದ ಮಾಧವ ಬರಲು
ಸುದತಿಯರು ಸಮ್ಮೇಳದಿಂದಲಿ
ಒದಗಿ ವಸಂತನಲ್ಲಾಡುವ ಸಮಯಕೆ
ಪದುಮನಾಭನ ಕಂಡರೆ ಬರಹೇಳು ಕೋಕಿಲ ‖ ೧ ‖

ಅಂಗಜನಯ್ಯನ ಅಗಣಿತನ
ಮಂಗಳ ಮಹಿಮನ ಮೂರುತಿಯ
ಸಂಗೀತ ಸೊಬಗಿನ ಸೊಲ್ನುಡಿಯಳೆ ನಮ್ಮ
ರಂಗನ ಕಂಡರೆ ಬರಹೇಳು ಕೋಕಿಲ ‖ ೨ ‖

ಇಟ್ಟಾಡುವ ಶೃತಿ-ಸ್ಮೃತಿಗಳಲಿ
ಬಟ್ಟೆಯ ಕಾಣೆವು ಪರಬೊಮ್ಮನ
ಸೃಷ್ಟಿಯೊಳಗೆ ನಮ್ಮ ಪುರಂದರ ವಿಠಲನ
ಥಟ್ಟನೆ ಕಂಡರೆ ಬರಹೇಳು ಕೋಕಿಲ ‖ ೩ ‖

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಸೊಲ್ನುಡಿ** – ಸರಳವಾದ ಮಾತು.

**ಇಟ್ಟಾಡುವ** – ಇಟ್ಟಡುವ, ಜಟಿಲವಾದ.

**ಬಟ್ಟೆಯ** – ದಾರಿಯನ್ನು.

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, gopi, kogile, sripati, Madhava, madhu, aganita, mangala, sangeetha, ranga, shruthi, parabrahma,
**Pravachana:** NA
**Explanation:** NA